Sri M. Y. GHORPADE.—There is something in what the Hon. Member says. The Sates which have not raised additional resources to the full extent have benefitted by the recommendation of the Finance Commission because, the Finance Commission does not rigidly go by capacity for resource mobilisation by the States. Therefore, those states have benefited more than the States like Karnataka which have raised resources to the full extent. But, the banefit they have received only marginal. It do s not run into several hundred crores. But, in a limited sense what the hon. Member says is correct.

Assistanee To S.Cs./S.Ts. To Start Smal Scale Industries

639. Sri P. MUNIYAPPA (Mulbagal).—

Will the Minister for Industries and Parliamentary Affairs be pleased to state.—

(*a*) the steps taken by the Government to help the Scheduled Castes and Scheduled Tribes in starting the Small Scale Industries to improve their economic conditions ;

(*b*) the nuraber of industries including small scale industries so far started by these people and their nature ;

(*c*) the number of industries started by these people with the sole assistance of Government and which are they ;

(*d*) the number of industries started by those other than Scheduled Castes and Scheduled Tribes and their nature ?

Sri S. M. KRISHNA (Minister for Industries and Parliamentary Affairs.—

(*a*) The Department of Industries and Commerce has prepared a separate sub-plan for the welfare of Scheduled Castes and Scheduled Tribes involving an outlay of Rs. 81 60 lakhs in the Fifth Five Year Plan.

Preference will be given to entrepreneurs belonging to the Scheduled Castes and Scheduled Tribes in allotment of sheds in different Industrial Estates in the State. Training is also given to Scheduled Castes and Scheduled Tribes candidates in the Artisan Training Institutes run by the department on stipendiary basis.

(*b*) Not available since the industries are not classified on communal basis.

(*c*) Does not arise in view of reply to clause (*b*).

(*d*) Does not arise in view of reply to clause (*b*).

ಶ್ರೀ ಪಿ. ಮುನಿಯಪ್ಪ.—ಸಾಮಿ, ತಮ್ಮ ಉತ್ತರದಲ್ಲಿ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡ ಜಾತಿಯವರ ಕಲ್ಯಾಣಕ್ಕಾಗಿ 81.60 ಲಕ್ಷ ರೂಪಾಯೀಗಳ ವೆಚ್ಚದಲ್ಲಿ ಷೆಡ್‌ಗಳನ್ನು ನಿರ್ಮಾಣಮಾಡುತ್ತೇನೆ ಎಂದು ಹೇಳಿದ್ದೀರಿ. ನಾನು ಕೇಳಿರುವುದು ಅದಲ್ಲ. ಇದುವರೆಗೂ ಸರ್ಕಾರದವರೂ ಹರಿಜನ ಮತ್ತು ಗಿರಿಜನರಿಗೆ ಈ ಕೈಗಾರಿಕೆ ವಿಷಯದಲ್ಲಿ ಎಷ್ಟು ಮಂಜೂರು ಮಾಡಿದ್ದೀರಿ ಎಂದು ಕೇಳಿದ್ದೇನೆ.

† ಶ್ರೀ ಎಸ್. ಎಂ. ಕೃಷ್ಣ.—ನಾವು ಪ್ರತ್ಯೇಕವಾಗಿ, ಇವು ಹರಿಜನರು ಮಾಡಬೇಕಾದಂಥ ಕೈಗಾರಿಕೆಗಳು, ಇವು ಬಾಕಿಯವರು ಮಾಡಬೇಕಾದಂಥ ಕೈಗಾರಿಕೆಗಳು ಎಂದು ಕಂಪಾರ್ಟ್‌ಮೆಂಟ್ ರೈಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಾರ್ವತ್ರಿಕ ಧೋರಣೆ ಏನೆಂದರೆ, ಯಾರಾದರೂ ಹರಿಜನ ಕೈಗಾರಿಕೋದ್ಯಮಿಗಳು ಮುಂದೆ ಬಂದರೆ ಅವರಿಗೆ ಸವಲತ್ತುಗಳನ್ನು ಕಲ್ಪಿಸಿಕೊಡಬೇಕು ಎನ್ನುವುದು ಒಂದು. ಎರಡನೆಯದು, ಲೆದರ್ ಇಂಡಸ್ಟ್ರಿ ಡೆವಲಪ್‌ಮೆಂಟ್‌ಗೋಸ್ಕರ ಒಂದು ಕಾರ್ಪೊರೇಷನ್ ಮಾಡಬೇಕು ಎಂದು ಈಗಾಗಲೇ ತಾತ್ವಿಕವಾದ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಇದರ ನೇರವಾದ ಫಲ ನಮ್ಮ ಸಮಾಜದಲ್ಲಿ ಬಹಳ ಕೆಳಗೆ ಇರತಕ್ಕ ವರ್ಗದ ಜನರಿಗೆ ಹೆಚ್ಚಿಗೆ ತಲುಪುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಬಲಪಡಿಸಬೇಕು ಎಂದು ಕೆಲವು ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮತ್ತು ಸಣ್ಣ ಕೈಗಾರಿಕೆಗಳಲ್ಲೂ ಕೂಡ ಷೆಡ್‌ಗಳನ್ನು ಅಲಾಟ್‌ಮೆಂಟ್ ಮಾಡತಕ್ಕ ವಿಚಾರದಲ್ಲೂ ಕೂಡ ಹರಿಜನ ಪದವೀಧರರು ಮುಂದೆ ಬಂದರೆ ಅವರಿಗೆ ವಿಶೇಷವಾದ ರಿಯಾಯಿತಿ ತೋರಿಸಿ, ಪ್ರಯಾರಿಟಿ ಮೇರೆ ಕೊಡಬೇಕು ಎಂಬ ತೀರ್ಮಾನವನ್ನು ಕೂಡ ಸರ್ಕಾರದವರು ತೆಗೆದುಕೊಂಡಿದ್ದಾರೆ.

ಶ್ರೀ ಪಿ. ಮುನಿಯಪ್ಪ.—ಎರಡನೇ ವಿಷಯದಲ್ಲಿ, ತಾಲ್ಲೂಕುಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಕಾರ್‌ಸ್ಕೇರ್ ಇಂಡಸ್ಟ್ರಿ ಆಫೀಸರ್ಸ್ ಬೇಕಾದಷ್ಟು ಜನ ಇದ್ದಾರೆ. ಇದುವರೆಗೆ ಹರಿಜನರಿಗೆ ಮತ್ತು ಗಿರಿಜನರಿಗೆ ತಾಲ್ಲೂಕುಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಯಾವ ಒಂದು ಸ್ಕಾರ್ ಸ್ಕೇರ್ ಇಂಡಸ್ಟ್ರಿ ಮಂಜೂರಾಗಿಲ್ಲ. ಈಗಲಾದರೂ ತಮ್ಮ ಒಂದು ಸ್ಪೆಷಲ್ ಸ್ಕೀಂನಲ್ಲಿ ಮಂಜೂರು ಮಾಡಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕುಮಟ್ಟದಲ್ಲಿ ಯಾರಾದರೂ ಹರಿಜನ ಗಿರಿಜನರು ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ, ಬಾಕೀ ಯವರಿಗೆ ಏನು ಸವಲತ್ತುಗಳನ್ನು ಕೊಡುತ್ತೇವೆ, ಅದನ್ನೇ ಅವರಿಗೂ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಜಿಲ್ಲಾಮಟ್ಟದಲ್ಲಿ ಒಬ್ಬರು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್, ತಾಲ್ಲೂಕುಮಟ್ಟದಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್ ಇದ್ದಾರೆ. ಜಾಸ್ತಿ ಅಧಿಕಾರಿಗಳು ಇಲ್ಲ. ಯಾರಾದರೂ ಹರಿಜನ ಪದವೀಧರರು ನಿರುದ್ಯೋಗಿಗಳು ಮುಂದೆ ಬಂದು, ಸಣ್ಣ ಕೈಗಾರಿಕೆಗಳನ್ನು ಮಾಡುತ್ತೇವೆಂದು ಅಭಿಲಾಷೆ ತೋರಿಸಿದರೆ, ಅವರಿಗೆ ಸೂಕ್ತವಾದಂಥ ಸಲಹೆಗಳನ್ನು ಕೊಡುತ್ತೇವೆ ಮತ್ತು ಸವಲತ್ತುಗಳನ್ನು ಕೂಡ ಕಲ್ಪಿಸಿಕೊಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ 648, 650 ಮತ್ತು 652 ಒಂದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಗಳಿವೆ. ಈ ಪ್ರಶ್ನೆಗಳನ್ನು ಒಟ್ಟಿಗೆ ಕೇಳಬಹುದು.